ಅಸಲು ದಾವಾ ನಂಃ 46/2022
ಡಿ ಡಬ್ಲ್ಯುಃ3

<u>ದಿನಾಂಕಃ **19-04-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಲ್ ವಿ ಎಂ ವಕೀಲರಿಂದಃ</u>

ನಾನು ಎಂ.ಎ., ಸ್ನಾತಕೊತ್ತರ ಪದವಿ ಮುಗಿಸಿರುತ್ತೇನೆ. ನಾನು ಎಲ್.ಐ.ಸಿ ಶಾಖೆ ಕೊಪ್ಪಾದಲ್ಲಿ ಕ್ಲರ್ಕ್ ಅಂತ ಕೆಲಸ ಮಾಡುತ್ತಿರುತ್ತೇನೆ. ನನ್ನ ಜನ್ಮ ದಿನಾಂಕ 12.09.1967 ಇರುತ್ತದೆ. ನಾನು ಮೊದಲು 1991 ರಲ್ಲಿ ಹಿರಿಯೂರಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ ನಂತರ ಕೊಪ್ಪ, ಅಲ್ಲಿಂದ ಹಿರಿಯೂರು, ಅಲ್ಲಿಂದ ಮೂಡಿಗೆರೆ, ಅಲ್ಲಿಂದ ಚೆನ್ನಗಿರಿ, ನಂತರ ಚೆನ್ನಗಿರಿಯಿಂದ ಕೊಪ್ಪಕ್ಕೆ , ಕೊಪ್ಪದಿಂದ ತರೀಕೆರೆಗೆ ನಂತರ ತರೀಕೆರೆಯಿಂದ ಕೊಪ್ಪಗೆ ವರ್ಗಾವಣೆಗೊಂಡಿರುತ್ತೇನೆ. ನಾನು ತರೀಕೆರೆಯಿಂದ 2020 ರಿಂದ ಕೊಪ್ಪದಲ್ಲಿ ಕೆಲಸ ನಿರ್ವಹಿಸುತ್ತಾ ಇರುತ್ತೇನೆ. ನಾನು ತರೀಕೆರೆಯಲ್ಲಿ 11 ತಿಂಗಳುಗಳ ಕಾಲ ಕೆಲಸ ನಿರ್ವಹಿಸಿರುತ್ತೇನೆ. ನಾನು 2007 ರಿಂದ 2010 ರವರೆಗೆ ಚೆನ್ನಗಿರಿಯಲ್ಲಿ ಕೆಲಸ ನಿರ್ವಹಿಸಿರುತ್ತೇನೆ.

2. ನಾನು 2016 ರಲ್ಲಿ ಎಲ್.ಐ.ಸಿ., ಕೊಪ್ಪ ಶಾಖೆಯಲ್ಲಿ ಕ್ಲರ್ಕ್ ಅಂತ ಕೆಲಸ ನಿರ್ವಹಿಸುತ್ತಿದ್ದೆನು. ನಮ್ಮ ಕಛೇರಿ ಅವಧಿ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 05.15 ರವರೆಗೆ ಇರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಬಿ ಹೆಚ್ ಕಂಪ್ಯೂಟರ್ ಸೆಂಟರ್ ನಲ್ಲಿ ತಯಾರಿಸಲಾಗಿರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನನಗೆ ಗೊತ್ತಿದ್ದಷ್ಟು ವಿಚಾರಗಳು ನಾನೆ ಮಾಹಿತಿ ಕೊಟ್ಟಿರುತ್ತೇನೆ ಉಳಿದ ವಿಚಾರಗಳು ವಕೀಲರ ಕಡೆಯಿಂದ ಕೇಳಿ ಮಾಹಿತಿ ಕೊಟ್ಟಿರುತ್ತೇನೆ. ನಾನು ನವೀನ್ ರಾವ್ ಹಾಗೂ ಬೇರೆ ವಕೀಲರ ಬಳಿ ನನ್ನ ಪ್ರಮಾಣ ಪತ್ರಕ್ಕೆ ಮಾಹಿತಿ ಪಡೆದುಕೊಂಡಿರುತ್ತೇನೆ. ನಾನು 2027 ನವೆಂಬರ್ ತಿಂಗಳಲ್ಲಿ ನನ್ನ ಸೇವೆಯಿಂದ ನಿವೃತ್ತಿ ಇರುತ್ತದೆ. ನಮ್ಮ ಸೇವಾ ನಿವೃತ್ತಿ 60 ವರ್ಷಕ್ಕೆ ಇರುತ್ತದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ವಯಸ್ಸು 55 ಎಂದು ನಮೂದಿಸಿರುತ್ತೇನೆ ಎಂದರೆ ಸಾಕ್ಷಿ ಟೈಪಿಂಗ್ ತಪ್ಪಾಗಿ 57 ವರ್ಷ ಇರುತ್ತದೆ ಎಂದು ಉತ್ತರಿಸುತ್ತಾರೆ.

3. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ವಕೀಲರೇ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರು ನನಗೆ ಸಂಬಂಧಿಕರು ಆಗಬೇಕು. ನಾನು ವಾದಿಗೆ ಸಂಬಂಧಿಕರು ಇರುವುದಿಲ್ಲ ಎಂದರೆ ಸರಿಯಲ್ಲ. ಶಕುಂತಲಮ್ಮ ಇವರಿಗೆ 8 ಜನ ಮಕ್ಕಳು ಇರುತ್ತಾರೆ. ನಂತರ ಅವರಲ್ಲಿ ಅರವಿಂದ್ ಎನ್ನುವ ಮಗ ತೀರಿಕೊಂಡಿದ್ದಾರೆ. ಸದರಿ ಅರವಿಂದ್ ಇವರು 6-8 ತಿಂಗಳ ಹಿಂದೆ ತೀರಿಕೊಂಡಿರುತ್ತಾರೆ. ನನಗೆ ನವೀನ್ ರಾವ್ ವಕೀಲರು 1995 ರಿಂದ ಪರಿಚಯ ಇರುತ್ತಾರೆ. ನಿಡಿ- 2 ಕ್ಕೆ ಸಹಿ ಮಾಡಲು ನನಗೆ ಶಕುಂತಲಮ್ಮ ಬರಲು ಹೇಳಿರುತ್ತಾರೆ. ಆಗಸ್ಟ್ 2016 ರಂದು ಶಕುಂತಲಮ್ಮ ಇವರು ನನಗೆ ಸಹಿ ಮಾಡಲು ಬರುವಂತೆ ಹೇಳಿದ್ದರು. ಶಕುಂತಲಮ್ಮ ಇವರು ತಾವು ದಾನ ಪತ್ರವನ್ನು ನನಗೆ ಹೇಳಿ ರೆಡಿ ಮಾಡಿರುತ್ತೇನೆ ಸಹಿ ಮಾಡಲು ಬರುವಂತೆ ನನಗೆ ಹೇಳಿರುತ್ತಾರೆ. ನಾನು ಶಕುಂತಲಮ್ಮ ಇವರ ಜೊತೆ ವಕೀಲರ ಕಛೇರಿಗೆ ಹೋಗಿರುವುದಿಲ್ಲ. ಸದರಿ ದಾನ ಪತ್ರವನ್ನು ನವೀನ್ ರಾವ್ ವಕೀಲರ ಬಳಿ ತಯಾರಿಸಿರುವುದಾಗಿ ಅವರು ನನಗೆ ಹೇಳಿದ್ದರು. ನಾನು ನವೀನ್ ರಾವ್ ವಕೀಲರ ಕಛೇರಿಗೆ ದಾನ ಪತ್ರವನ್ನ ತಯಾರಿಸುವ ಕಾಲಕ್ಕೆ ಹೋಗಿರುವುದಿಲ್ಲ.

4. ದಾನ ಪತ್ರವನ್ನು ನೋಂದಣಾಧಿಕಾರಿಗಳು ನಮ್ಮ ಸಮಕ್ಷಮ ಓದಿ ಹೇಳಿರುತ್ತಾರೆ. ದಾನ ಪತ್ರವನ್ನು ಯಾರು ಟೈಪ್ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ ಆದರೆ ನವೀನ್ ರಾವ್ ವಕೀಲರ ಕಛೇರಿಯಲ್ಲಿ ತಯಾರಿಸಲಾಗಿರುತ್ತದೆ. ಸದರಿ ನಿವೇಶನ ಮತ್ತು ಮನೆ ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದಾನ ಪತ್ರ ತಯಾರಿಸುವ ಕಾಲಕ್ಕೆ ಏನೇನು ದಾಖಲೆಗಳನ್ನು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ನ್ಯಾಯಾಲಯದಿಂದ ನೋಟೀಸ್ ಬಂದ ನಂತರ ಸದರಿ ಆಸ್ತಿಗ ಸಂಬಂಧಪಟ್ಟಂತೆ ವಕೀಲರ ಬಳಿ ಕೇಳಿದಾಗ ನನಗೆ ಅಸ್ಸೆಸ್ಮೆಂಟ್ ನಂಬರ್ ಗೊತ್ತಾಗಿರುತ್ತದೆ. ಸದರಿ ಅಸ್ಸೆಸ್ಮೆಂಟ್ ನಂಬರ್ ಬರೆಯಲು ವಕೀಲರು ಮಾಹಿತಿ ಕೊಟ್ಟಿದ್ದರು ಎಂದರೆ ಸರಿ. ನಾನು ನೋಂದಣಿ ಕಛೇರಿಗೆ ದಾನ ಪತ್ರ ಆಗುವ ದಿನ ಸುಮಾರು 12.50 ರ ಸಮಯದಲ್ಲಿ ಹೋಗಿರಬಹುದು. ನಾನು ನಮ್ಮ ಕಛೇರಿ ಊಟದ ಸಮಯ 01.00 ರಿಂದ 02.00 ಗಂಟೆ ಇದ್ದ ಕಾರಣ ನಾನು ನಮ್ಮ ಮೇಲಾಧಿಕಾರಿಯವರಿಂದ ಅನುಮತಿ ಪಡೆದಿರುವುದಿಲ್ಲ. ನಾನು ಕಛೇರಿಯಿಂದ

15 ನಿಮಿಷ ಮುಂಚಿತವಾಗಿ ಹೋಗುವ ಬಗ್ಗೆ ನಮ್ಮ ಮೇಲಾಧಿಕಾರಿಗೆ ತಿಳಿಸಿ ಹೋಗಿರುತ್ತೇನೆ.

5. ನೋಂದಣಿ ಅಧಿಕಾರಿ ಕಛೇರಿಯಲ್ಲಿ ನೋಂದಣಿ ಪ್ರಕ್ರಿಯೆ ಮಧ್ಯಾಹ್ನ 01.45 ರ ಸುಮಾರಿಗೆ ಮುಗಿದಿರುತ್ತದೆ. ನೋಂದಣಿ ಕಛೇರಿಯ ಸಮಯ 10.30 ರಿಂದ 05.30 ರವರೆಗೆ ಇರುತ್ತದೆ. ಸದರಿ ಕಛೇರಿಯ ಊಟದ ಸಮಯವು ಎಷ್ಟು ಹೊತ್ತಿಂದ್ದ ಎಷ್ಟು ಹೊತ್ತು ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಶಕುಂತಲಮ್ಮ ಇವರು ದಾನ ಪತ್ರಕ್ಕೆ ನೋಂದಣಾಧಿಕಾರಿ, ನನ್ನ ಹಾಗೂ ಇನ್ನೊಬ್ಬ ಸಾಕ್ಷಿದಾರರ ಸಮಕ್ಷಮ ಶಕುಂತಲಮ್ಮ ಸಹಿ ಮಾಡಿರುತ್ತಾರೆ. ಸದರಿ ನೋಂದಣಾಧಿಕಾರಿಯ ಹೆಸರು ಗೊತ್ತಿರುವುದಿಲ್ಲ ಆದರೆ ಅವರು ಪುರುಷರು ಇದ್ದರು. ದಾನ ಪತ್ರದ ಮೊದಲನೇ ಪುಟದಲ್ಲಿ ಶಕುಂತಲಮ್ಮ ಎಂಬ ಹೆಸರಿನಲ್ಲಿ ಎಷ್ಟು ಅಕ್ಷರಗಳು ಇರುತ್ತವೆ ಎಂದರೆ ಸಾಕ್ಷಿ 16 ಅಕ್ಷರಗಳು ಇರುತ್ತವೆ ಎಂದು ಉತ್ತರಿಸುತ್ತಾರೆ. 2 ನೇ ಪುಟದಲ್ಲಿ ಶಕುಂತಲಮ್ಮ ಎಂಬ ಹೆಸರಿನಲ್ಲಿ ಎಷ್ಟು ಅಕ್ಷರಗಳು ಇರುತ್ತವೆ ಎಂದರೆ ಸಾಕ್ಷಿ 14 ಅಕ್ಷರಗಳು ಇರುತ್ತವೆ ಎಂದು ಉತ್ತರಿಸುತ್ತಾರೆ. 3 ನೇ ಪುಟದಲ್ಲಿ ಶಕುಂತಲಮ್ಮ ಎಂಬ ಹೆಸರಿನಲ್ಲಿ ಎಷ್ಟು ಅಕ್ಷರಗಳು ಇರುತ್ತವೆ ಎಂದರೆ ಸಾಕ್ಷಿ 15 ಅಕ್ಷರಗಳು ಇರುತ್ತವೆ ಎಂದು ಉತ್ತರಿಸುತ್ತಾರೆ. 4 ನೇ ಪುಟದಲ್ಲಿ ಶಕುಂತಲಮ್ಮ ಎಂಬ ಹೆಸರಿನಲ್ಲಿ ಎಷ್ಟು ಅಕ್ಷರಗಳು ಇರುತ್ತವೆ ಎಂದರೆ ಸಾಕ್ಷಿ 15 ಅಕ್ಷರಗಳು ಇರುತ್ತವೆ ಎಂದು ಉತ್ತರಿಸುತ್ತಾರೆ. 1 ನೇ ಪುಟದ ಹಿಂಭಾಗದಲ್ಲಿ ಶಕುಂತಲಮ್ಮ ಎಂಬ ಹೆಸರಿನಲ್ಲಿ ಎಷ್ಟು ಅಕ್ಷರಗಳು ಇರುತ್ತವೆ ಎಂದರೆ ಸಾಕ್ಷಿ 14 ಅಕ್ಷರಗಳು ಇರುತ್ತವೆ ಎಂದು ಉತ್ತರಿಸುತ್ತಾರೆ.

6. ನಿಡಿ - 2 ರಲ್ಲಿ ಶಕುಂತಲಮ್ಮ ನವರ ಸಹಿ ಇರುವುದಿಲ್ಲ ಸದರಿ ಸಹಿಗಳನ್ನು ವಸಂತ ಇವರು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಎಲ್ ಐ ಸಿ ಏಜೆಂಟ್ ಇರುತ್ತಾರೆ ಎಂದರೆ ಸರಿ. ನಾನು ಹಾಗೂ 4 ನೇ ಪ್ರತಿವಾದಿ ಅನ್ಯೋನ್ಯವಾಗಿ ಇದ್ದೇವೆ ಎಂದರೆ ಸಾಕ್ಷಿ ಅವರು ನನ್ನ ಸಂಬಂಧಿಕರು ಹಾಗೂ ಅವರು ನಿರ್ವಹಿಸುವ ಕೆಲಸ ಬೇರೆ ಮತ್ತು ನಾನು ನಿರ್ವಹಿಸುವ ಕೆಲಸ ಬೇರೆ ಎಂದು ಉತ್ತರಿಸುತ್ತಾರೆ. ಶಕುಂತಲಮ್ಮ ಇವರು ಯಾವತ್ತೂ ನನ್ನನ್ನು ದಾನ ಪತ್ರ ಬರೆದುಕೊಡುವುದಾಗಿ ನನಗೆ ಹೇಳಿರುವುದಿಲ್ಲ ನಾನು 4 ನೇ ಪ್ರತಿವಾದಿಯ ಮಾತನ್ನು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಕುಂತಲಮ್ಮ ಇವರು ನೋಂದಣಿ ಕಛೇರಿಯಲ್ಲಿ ತಮ್ಮ ಗುರುತಿನ ಬಗ್ಗೆ ತಮ್ಮ ಆಧಾರ್ ಕಾರ್ಡ್ ಹಾಗೂ

ಪಾನ್ ಕಾರ್ಡ್ ಅನ್ನು ಕೊಟ್ಟಿದ್ದರು. ಶಕುಂತಲಮ್ಮ ಇವರು ಯಾವತ್ತೂ ಕೊಪ್ಪಾದಲ್ಲಿ ವಾಸ ಇರಲಿಲ್ಲ ಮೂಲ ಮನೆ ಕೆಲ್ಕೆರೆಯಲ್ಲಿ ವಾಸ ಇದ್ದರು ಎಂದರೆ ಸರಿಯಲ್ಲ. ದಾನ ಪತ್ರದಲ್ಲಿ ಶಕುಂತಲಮ್ಮ ತಾವು ಎಲ್ಲಿ ವಾಸ ಇದ್ದರು ಎಂದು ಬರೆದಿರುವ ಬಗ್ಗೆ ಗೊತ್ತಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲಾ ಎಂದು ಉತ್ತರಿಸುತ್ತಾರೆ. ನಿಡಿ - 2 ರಲ್ಲಿ ನಮೂದಿಸಿದ ವಿಳಾಸದಲ್ಲಿ ಶಕುಂತಲಮ್ಮ ವಾಸ ಇರುವುದು ಸುಳ್ಳು ಎಂದರೆ ಸಾಕ್ಷಿ ಅವರು ಕೊಪ್ಪಾದಲ್ಲಿಯೇ ವಾಸ ಇದ್ದರು ಉತ್ತರಿಸುತ್ತಾರೆ. ನಿಡಿ- 2 ರಲ್ಲಿ ಶಕುಂತಲಮ್ಮ ವಿಳಾಸವನ್ನು ಯಾವ ಆಧಾರದ ಮೇಲೆ ಬರೆದಿರುತ್ತಾರೆ ಎಂದರೆ ಸಾಕ್ಷಿ ಆಧಾರ್ ಕಾರ್ಡ್ ವಿಳಾಸ ಇರಬಹುದು ಎಂದು ಉತ್ತರಿಸುತ್ತಾರೆ.

7. ದಾನ ಪತ್ರ ಬರೆದುಕೊಡುವ ಕಾಲಕ್ಕೆ ಶಕುಂತಲಮ್ಮ ಇವರಿಗೆ ಸುಮಾರ 80 ವರ್ಷ ಇರಬಹುದು. ಶಕುಂತಲಮ್ಮ ಇವರಿಗೆ ಕಣ್ಣು ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಶಕುಂತಲಮ್ಮ ಓಡಾಡಲು ಆಗದೇ ವೀಲ್ ಚೇರ್ ನಲ್ಲಿ ಕುಳಿತಿದ್ದರು ಎಂದರೆ ಸರಿಯಲ್ಲ. ನಿಪಿ- 44 ರಂತೆ ಶಕುಂತಲಮ್ಮ ವೀಲ್ ಚೇರ್ ನಲ್ಲಿ ಓಡಾಡುತ್ತಿದ್ದರು ಎಂದರೆ ಸಾಕ್ಷಿ ನಾನು ಅವರು ಆ ಸ್ಥಿತಿಯಲ್ಲಿ ಇರುವುದನ್ನು ಯಾವತ್ತು ನೋಡಿರುವುದಿಲ್ಲ ಎಂದು ಉತ್ತರಿಸುತ್ತಾರೆ ಸಾಕ್ಷಿ ಮುಂದುವರೆದು ಅವರು ತೀರಿಕೊಳ್ಳುವವರೆಗೂ ಯಾವತ್ತು ವೀಲ್ ಚೇರ್ ನಲ್ಲಿ ಕುಳಿತಿರುವುದನ್ನು ನಾನು ನೋಡಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಆ ದಿನ ನೋಂದಣಿ ಕಛೇರಿಗೆ ಶಕುಂತಲಮ್ಮ ಇವರನ್ನು ನಾನು ಹಾಗೂ ಮಂಜುನಾಥ ಮೂವರು ಸೇರಿಕೊಂಡು ಒಂದೇ ಆಟೋದಲ್ಲಿ ನೋಂದಣಿ ಕಛೇರಿಗೆ ಹೋಗಿರುತ್ತೇವೆ. ಮಂಜುನಾಥ ತಂದೆ ಹೆಸರು ನನಗೆ ಗೊತ್ತಿರುವುದಿಲ್ಲ ಆದರೆ ಅವರು ಜಯಪುರದಲ್ಲಿ ಟೈಲರಿಂಗ್ ಕೆಲಸ ಮಾಡುತ್ತಿದ್ದು ನಾನು ಚಿಕ್ಕಂದಿನಿಂದ ನೋಡಿರುತ್ತೇನೆ. ನಾನು ಮಧ್ಯಾಹ್ನ 12.45 ರ ಸುಮಾರಿಗೆ ಶಕುಂತಲಮ್ಮ ರವರ ಮನೆಗೆ ಹೋಗಿರುತ್ತೇನೆ. ನಾನು ಶಕುಂತಲಮ್ಮ ಇವರ ಮನೆಯಿಂದ ನೇರವಾಗಿ ನೋಂದಣಿ ಕಛೇರಿಗೆ ಹೋಗಿರುತ್ತೇನೆ. ನಾವು ನೋಂದಣಿ ಕಛೇರಿಗೆ ಹೋಗುವಾಗ ನನ್ನ ಬಳಿ ದಾನ ಪತ್ರ ಇರಲಿಲ್ಲ ಆದರೆ ಶಕುಂತಲಮ್ಮ ನವರ ಬಳಿ ದಾನ ಪತ್ರ ಇತ್ತು.

8. ದಾನ ಪತ್ರಕ್ಕೆ ಶಕುಂತಲಮ್ಮ ಇವರು ನೋಂದಣಾಧಿಕಾರಿ ಹೇಳಿದ ಕಡೆ ಮೊದಲು ಸಹಿ ಮಾಡಿರುತ್ತಾರೆ. ನಂತರ 4 ನೇ ಪ್ರತಿವಾದಿ ದಾನ ಪತ್ರಕ್ಕೆ ಸಹಿ

ಮಾಡಿರುತ್ತಾರೆ. ನಾನು ನೋಂದಣಿ ಕಛೇರಿಗೆ ಹೋದ 10-15 ನಿಮಿಷಗಳ ನಂತರ 4 ನೇ ಪ್ರತಿವಾದಿ ಅಲ್ಲಿಗೆ ಬಂದಿರುತ್ತಾರೆ. ನಂತರ ಮಂಜುನಾಥ ಸಹಿ ಮಾಡಿ ಅವರ ನಂತರ ನಾನು ದಾನ ಪತ್ರಕ್ಕೆ ಸಹಿ ಮಾಡಿರುತ್ತೇನೆ. ದಾನ ಪತ್ರಕ್ಕೆ ನವೀನ್ ರಾವ್ ವಕೀಲರು ನೋಂದಣಿ ಕಛೇರಿಯಲ್ಲಿ ಸಹಿ ಮಾಡಿರುತ್ತಾರೆ. ದಾನ ಪತ್ರಕ್ಕೆ ಸಹಿ ಮಾಡಿರುವವರು ಉಪನೋಂದಣಾಧಿಕಾರಿ ಮುಂದೆ ಸಹಿ ಮಾಡಿರುತ್ತಾರೆ ಎಂದರೆ ಸರಿ. 4 ನೇ ಪ್ರತಿವಾದಿ ಶಕುಂತಲಮ್ಮ ಇವರು ಪಾಲಿನ ಜಮೀನಿನ ನಿರ್ವಹಣೆ ಮಾಡುತ್ತಿದ್ದರು ಎಂದರೆ ಸರಿ. 4 ನೇ ಪ್ರತಿವಾದಿ ಶಕುಂತಲಮ್ಮ ಇವರ ಕಡೆಯಿಂದ ಜಿ ಪಿ ಎ ಪತ್ರ ಪಡೆದುಕೊಂಡಿದ್ದರು ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. 4 ನೇ ಪ್ರತಿವಾದಿ ಶಕುಂತಲಮ್ಮ ಇವರಿಗೆ ಜಿ ಪಿ ಎ ಮಾಡಿಸಿಕೊಡುವುದಾಗಿ ನೋಂದಣಿ ಕಛೇರಿಗೆ ಶಕುಂತಲಮ್ಮ ಇವರನ್ನು ಕರೆದುಕೊಂಡು ಹೋಗಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಶಕುಂತಲಮ್ಮ ಇವರು ದಾನ ಪತ್ರವನ್ನು ಮಾಡಿಕೊಡುವ ಇಚ್ಛೆಯನ್ನು ಹೊಂದಿದ್ದರು ಎಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿ ಅವರು ನನ್ನ ಸಮಕ್ಷಮ 4 ನೇ ಪ್ರತಿವಾದಿ ತಮ್ಮನ್ನು ನೋಡಿಕೊಳ್ಳುತ್ತಿರುವುದಾಗಿ ಹಾಗೂ ಅವರಿಗೆ ದಾನ ಪತ್ರ ಮಾಡಿಕೊಡುವುದಾಗಿ ಹೇಳಿದ್ದರು ಎಂದು ಉತ್ತರಿಸುತ್ತಾರೆ. 4 ನೇ ಪ್ರತಿವಾದಿ ಉಳಿದ ಸಹೋದರರಿಗೆ ಮೋಸ ಮಾಡುವ ಸಲುವಾಗಿ ನಿಡಿ- 2 ನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ- 2 ಕ್ಕೆ ಶಕುಂತಲಮ್ಮ ಇವರು ಸಹಿ ಮಾಡಿರುವುದಿಲ್ಲ ಸದರಿ ದಾಖಲೆಯನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮಂಜುನಾಥ ಇವರು ಆ ದಿನ ನೋಂದಣಿ ಕಛೇರಿಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಶಕುಂತಲಮ್ಮ ಇವರನ್ನು ಯಾವತ್ತು ಆಸ್ಪತ್ರೆಗೆ ಸೇರಿಸಿರುವುದಿಲ್ಲ. ಶಕುಂತಲಮ್ಮ ಇವರ ಆರೋಗ್ಯದ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ. ನಾನು 4 ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಪ್ರತಿವಾದಿ **1** ರಿಂದ **3** ಹಾಗೂ **5** ರಿಂದ **7** ರ ಪರ ವಕೀಲರು ವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ನಮ್ಮ ಪರ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ**.**

ಮರು ವಿಚಾರಣೆಃ ಇಲ್ಲಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ**.**ರಾ**.**ಪುರ**,**
ಸಂಚಾರಿ ನ್ಯಾಯಾಲಯ**,** ಕೊಪ್ಪ**.**

ಸಾಕ್ಷಿದಾರರ ಸಹಿಃ